
# ಜನ್ಮಶತಮಾನೋತ್ಸವದ ಸ್ಮರಣೆ

ಮಂಗಳಮ್ಮ

**ರಾಮಕೃಷ್ಣ ಮಹಾಸಂಘದ ಪರಮಾಧ್ಯಕ್ಷರಾಗಿದ್ದ ಪರಮಪೂಜ್ಯ ಸ್ವಾಮಿ ರಂಗನಾಥಾನಂದಜಿ ಮಹಾರಾಜರ ಜನ್ಮಶತಮಾನೋತ್ಸವದ ಸಂದರ್ಭದಲ್ಲಿ ಅವರ ಕೆಲವು ನೆನಪುಗಳನ್ನು ಆತ್ಮೀಯವಾಗಿ ನಮ್ಮೊಡನೆ ಹಂಚಿಕೊಂಡಿರುವ ಲೇಖಕಿ ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ ಭಕ್ತರು.**



**"ನನ್ನ 'ಸಂನ್ಯಾಸಿ'ಯ ಕಾವಿ 'ಗೌನಿ'ಗಿಂತ ಬೇರೆ 'ಗೌನಿ'ನ ಆವಶ್ಯಕತೆ ಇಲ್ಲ. ನನಗೆ 'ಸ್ವಾಮಿ' ಎಂಬ ದೊಡ್ಡ 'ಪದವಿ'ಯೇ ರಾಮಕೃಷ್ಣ ಮಹಾಸಂಘದ ಪರಮಾಧ್ಯಕ್ಷರಿಂದ ಕೊಡಲ್ಪಟ್ಟಿದೆ."**

ಮಹಾತ್ಮರ ಸಂಗ ದೊರಕುವುದು ಅಪರೂಪ. ದೊರೆತಾಗ ಆದ ಅನುಭವವನ್ನು ಮನನ ಮಾಡುವುದರಿಂದ, ಧೂಳು ಮುಚ್ಚಿದಂತೆ ಇರುವ ಮನಸ್ಸು ನಿರ್ಮಲವಾಗುತ್ತದೆ, ಆನಂದ ಉಂಟಾಗುತ್ತದೆ. ಸ್ವಾಮಿ ರಂಗನಾಥಾನಂದರ ಜೀವನ ಒಂದು ಹಡಗಿನಂತೆ. ಸಾವಿರಾರು ಜನರು, ಇವರ ಪ್ರೇರಣೆಯಿಂದ ತಮ್ಮ ಬದುಕನ್ನು 'ಗುರಿ'ಯತ್ತ ಸಾಗಿಸಿ ಧನ್ಯರಾಗಿದ್ದಾರೆ. ಕೇರಳದ ಕುಗ್ರಾಮವಾದ ಟ್ರಿಕ್ಕೂರಿನ ಬಾಲಕ ಶಂಕರ 'ವಿಶ್ವಪ್ರಿಯ' ಸಂನ್ಯಾಸಿಯಾಗಿ, ಜನಮನದಲ್ಲಿ 'ಅಮರ'ನಾದ! **ಸ್ವಾಧ್ಯಾಯ, ಸ್ವಾನುಭವ, ಸ್ವಾರ್ಥರಾಹಿತ್ಯ, ಸ್ವಾವಲಂಬನೆ, ಮತ್ತು ಸಾಧನೆಗಳಿಂದ ಒಬ್ಬ ವ್ಯಕ್ತಿ 'ಮೇರುಶಿಖರ' ವಾಗಬಹುದೆಂಬುದಕ್ಕೆ ಪ್ರತ್ಯಕ್ಷಸಾಕ್ಷಿ ಸ್ವಾಮಿ ರಂಗನಾಥಾನಂದಜಿ! ಅವರ ಜನ್ಮಶತಮಾನೋತ್ಸವದ ಸಮಯದಲ್ಲಿ ಅವರಿಗಿದೋ, ಸ್ಮರಣಾಪುಷ್ಪದ ಶ್ರದ್ಧಾಂಜಲಿ.**

ಬದುಕಿಗೆ ಒಂದು 'ಗುರಿ' ಇರಬೇಕು. ಅದನ್ನು ಸಾಧಿಸಬೇಕೆಂಬ 'ಛಲ'ವೂ ಇರಬೇಕು. ಆಗ 'ದೈವಕೃಪೆ' ತಾನಾಗಿಯೇ ಒದಗಿಬರುತ್ತದೆ. ಸ್ವಾಮಿಗಳು ಸಂಪ್ರದಾಯಸ್ಥ ಬ್ರಾಹ್ಮಣ ಕುಟುಂಬವೊಂದರಲ್ಲಿ, ೧೯೦೮ ರ ಡಿಸೆಂಬರ್ ೧೫ ರಂದು ಜನಿಸಿದರು. ತಾಯಿ ಲಕ್ಷ್ಮಿ ಕುಟ್ಟಿ ಅಮ್ಮಾಳ್; ತಂದೆ ನೀಲಕಂಠಶಾಸ್ತ್ರಿಗಳು. ಬಾಲ್ಯದ ಕೆಲವು ಘಟನೆಗಳು ಅವರ ಭವಿಷ್ಯ ಜೀವನಕ್ಕೆ ತಳಪಾಯದಂತೆ ಆದವು. **ಕಷ್ಟಸಹಿಷ್ಣುತೆ, ವಿನಯ, ತಾಳ್ಮೆ, ದಯೆ, ಔದಾರ್ಯ, ಸ್ವಚ್ಛಂದ ವಾತಾವರಣದ ಸಾಹಸ, ಸ್ನೇಹ, ಸೌಹಾರ್ದತೆ, ಆಪತ್ತಿಗಾಗುವ ಬಾಂಧವ್ಯ** ಇತ್ಯಾದಿ ಉದಾತ್ತ ಗುಣಗಳನ್ನು ಅವರ ಬಾಲ್ಯದಲ್ಲಿಯೇ ಕಾಣುತ್ತೇವೆ.

ಎಂಟನೇ ತರಗತಿಯ ವಿದ್ಯಾರ್ಥಿಯಾಗಿದ್ದಾಗ, ಬಾಲಕ ಶಂಕರ 'ಜೀವನದ ಗುರಿ' ಯಾವುದೆಂಬುದನ್ನು ನಿಶ್ಚಯಿಸಿದ. The Gospel of Sri Ramakrishna (ರಾಮಕೃಷ್ಣ ವಚನವೇದ), Complete Works of Swami Vivekananda (ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ) ಪುಸ್ತಕಗಳ ಅಧ್ಯಯನ ಅವರು ರಾಮಕೃಷ್ಣ ಮಹಾ ಸಂಘಕ್ಕೆ ಸೇರಲು ಕಾರಣವಾಯಿತು. ದಿವ್ಯತ್ರಯರ ಜೀವನಗಳು ಅವರ ಮನಸ್ಸಿನಲ್ಲಿ ಅಚ್ಚೊತ್ತಿದ್ದವು. **'ತ್ಯಾಗ ಮತ್ತು ಸೇವೆ', 'ದೇಶಸೇವೆ' ಮತ್ತು 'ಜೀವರಲ್ಲಿ ಶಿವನನ್ನೇ ಕಾಣು'** – ಈ ಮಹಾನ್ ಸಂದೇಶಗಳು ಅವರಿಗೆ ಸ್ಫೂರ್ತಿಯನ್ನಿತ್ತವು. ಈ ಲೇಖನ ಅವರ ಕೆಲವು ನೆನಪುಗಳನ್ನು ಹಂಚಿಕೊಂಡು, ಮನಸ್ಸಿಗೆ ಆನಂದ ತಂದುಕೊಳ್ಳುವ ಹಂಬಲವಷ್ಟೇ; ಸ್ವಾಮಿಗಳ ಜೀವನಸಾಗರದಿಂದ ಅಲೆಅಲೆಯಾಗಿ ಸಾಗಿಬರುವ ತರಂಗಗಳಲ್ಲಿ ಸಂಗ್ರಹಿಸಿದ ಕೆಲವಷ್ಟು ತುಂತುರು ಹನಿಗಳ ಸಿಂಪರಣೆಯ ಪ್ರಯತ್ನವಷ್ಟೆ.

ಮೈಸೂರಿನ ಶ್ರೀರಾಮಕೃಷ್ಣ ಆಶ್ರಮಕ್ಕೆ ಬ್ರಹ್ಮಚಾರಿಯಾಗಿ ಪದಾರ್ಪಣೆ ಮಾಡಿದಾಗ ಅವರು ಮಾಡಬೇಕಾಗಿದ್ದುದು 'ಅಡುಗೆಭಟ್ಟ'ನ ಕೆಲಸ. ಸ್ವಾಮಿಗಳು ಹೇಳುತ್ತಿದ್ದರು, "ನನಗೆ ೧೨ ವರ್ಷವಿದ್ದಿರಬಹುದು. ತಾಯಿಯ ಜೊತೆ ದೊಡ್ಡ ಕುಟುಂಬಕ್ಕೆ ಅಡುಗೆ ಮಾಡುವ ಪ್ರಸಂಗ ಒದಗಿತು. ಸುಮಾರು ಎರಡು



ವರ್ಷಗಳ ಕಾಲ, ಆ ಕೆಲಸದಲ್ಲಿ ನಿಪುಣನಾದೆ. ಅದು ಈಗ ಮೈಸೂರಿನಲ್ಲಿ ಉಪಯೋಗಕ್ಕೆ ಬಂತು. ರುಚಿಯಾದ ಅಡುಗೆ ಮಾಡಿ, ಆಶ್ರಮವಾಸಿಗಳನ್ನು ಸಂತೋಷಪಡಿಸುವ ಅವಕಾಶ ನನಗೆ ಸಿಕ್ಕಿತು.”

ಸ್ವಾಮಿಗಳ ಆಸ್ಟ್ರೇಲಿಯಾ ಪ್ರವಾಸದಲ್ಲೊಮ್ಮೆ ನಡೆದ ಘಟನೆ. ಆತಿಥೇಯರ ಮನೆಯಲ್ಲಿ ಅವರು ಉಳಿತಿದ್ದರು. ಮನೆಯಾಕೆ ಸ್ವಲ್ಪ ವಯಸ್ಸಾದವರು, ಸ್ಥೂಲಶರೀರ. ಅಡುಗೆಮನೆಯಲ್ಲಿ ‘ಅತಿಥಿ’ ಗಳಿಗಾಗಿ ವಿಶೇಷ ಅಡುಗೆ ಮಾಡುತ್ತಿದ್ದಾರೆ. ಸ್ವಾಮಿಗಳು ಅಲ್ಲಿಗೆ ಬಂದರು. ನೋಡುತ್ತಾರೆ, ಆಕೆ ಕಷ್ಟಪಡುತ್ತಿದ್ದರು, ಮುಖದ ಮೇಲಿನ ಬೆವರು ಒರೆಸಿಕೊಳ್ಳುತ್ತಿದ್ದರು. ಸ್ವಾಮಿಗಳಿಗೆ ಸುಮ್ಮನಿರಲಾಗಲಿಲ್ಲ. “ನಾನು ನಿಮಗೆ ಸಹಾಯಮಾಡಲೇ?” ಎಂದು ಕೇಳಿದರು. ಆಕೆ, “ಇಲ್ಲ ಇಲ್ಲ. ನೀವು ಅತಿಥಿಗಳು; ನಿಮ್ಮ ಕೈಲಿ ಏನನ್ನೂ ಮಾಡಿಸಬಾರದು” ಎಂದು ತಡೆದರು. ಸ್ವಾಮಿಗಳು, “ನನ್ನ ವಿಷಯ ದಲ್ಲಿ ನೀವು ಹಾಗೆಲ್ಲ ಭಾವಿಸಬೇಡಿ, ನಾನು ನಿಮ್ಮವನೇ ಎಂದು ತಿಳಿಯಿರಿ” ಎಂದು ಹೇಳಿ, ಆಕೆಯ ಜೊತೆ ಸೇರಿ ರುಚಿರುಚಿಯಾದ ಪಲ್ಯ, ಪಾಯಸ ತಯಾರಿಸಿದರು. ತಮ್ಮ ಅಡುಗೆಯ ರುಚಿಯನ್ನು ಆತಿಥೇಯರಿಗೂ ತೋರಿಸಿಕೊಟ್ಟು, ಆನಂದಪಟ್ಟ ಸಹೃದಯಜೀವಿ ಸ್ವಾಮಿ ರಂಗನಾಥಾನಂದಜಿ!

ಶ್ರೀಮಾತೆಯವರ ಜೀವನದ ಸರಳತೆ ಹಾಗೂ ಮತ್ತೊಬ್ಬರ ತಪ್ಪುಗಳನ್ನು ಎತ್ತಿತೋರಿಸದ ಸೌಜನ್ಯಶೀಲತೆ ಸ್ವಾಮಿಗಳ ಜೀವನ ದಲ್ಲೂ ಬೆರೆತುಹೋಗಿತ್ತು. ಊಟ ತಿಂಡಿ ಉಡುಗೆಗಳ ವಿಷಯದಲ್ಲಿ ಅವರು ವಿಶೇಷ ಗಮನಕೊಟ್ಟವರೇ ಅಲ್ಲ. ಭಾರತದ ಸಾಂಸ್ಕೃತಿಕ ರಾಯಭಾರಿಯಾಗಿ ಪ್ರಪಂಚವನ್ನೆಲ್ಲ ಪರ್ಯಟನೆ ಮಾಡುವಾಗಲೂ, ಅವರ ಸಾಮಾನುಗಳೆಂದರೆ ಬಟ್ಟೆಗಳ ಚೀಲ ಒಂದು, ಔಷಧಿಗಳ ಚೀಲ ಇನ್ನೊಂದು, ಮತ್ತೊಂದು ಸಣ್ಣ ಕೈಚೀಲ, ಇಷ್ಟೆ.

ಮಲೇಷಿಯಾ ವಿಶ್ವವಿದ್ಯಾನಿಲಯದ ಪದವಿಪ್ರದಾನ ಸಮಾ ರಂಭಕ್ಕೆ ಇವರು ಮುಖ್ಯ ಅತಿಥಿಗಳಾಗಿ ಆಹ್ವಾನಿತರಾಗಿದ್ದರು. ಅದು ಸ್ವಾಮಿಗಳಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡುವ ಸಮಾರಂಭವೂ ಆಗಿತ್ತು. ಸಮಾರಂಭದ ಪ್ರಾರಂಭದಲ್ಲಿ ವಿಶ್ವ ವಿದ್ಯಾನಿಲಯದ ಕುಲಪತಿಗಳು ಮತ್ತು ಇತರೆ ಕೆಲವು ಗಣ್ಯವ್ಯಕ್ತಿಗಳು ತಮ್ಮ ಸ್ಥಾನಗಳಿಗೆ ತಕ್ಕ ಗೌನುಗಳನ್ನು ಧರಿಸಿದರು. ಸ್ವಾಮಿಗಳಿಗೂ ನಿಯಮಿತ ಗೌನು ಧರಿಸಲು ವಿನಂತಿಸಿಕೊಂಡರು. ಆದರೆ ಇವರ ಅಳತೆಗೆ ತಕ್ಕ ಗೌನು ಇರಲಿಲ್ಲ. ಆಗ ಸ್ವಾಮಿಗಳು, “ನನ್ನ ಈ ಉಡುಪಿಗಿಂತ ಬೇರೆ ಗೌನು ಬೇಕೆ? ಅದೂ ಅಲ್ಲದೆ ನನಗೆ ಈ ಗೌರವ ಡಾಕ್ಟರೇಟ್ ಪದವಿಗಿಂತ ಮುಂಚೆಯೇ ಬೇರೆಯದೇ ಆದ ಉನ್ನತ ‘ಪದವಿ’ಯೂ ಸಿಕ್ಕಿಬಿಟ್ಟಿದೆ” ಎಂದರು. ಕುತೂಹಲದಿಂದ ಎಲ್ಲರೂ, “ಎಲ್ಲಿ? ಯಾವ ಕಾಲೇಜು?” ಎಂದೆಲ್ಲಾ ವಿಚಾರಿಸಿದಾಗ, “ನನ್ನ ‘ಸಂನ್ಯಾಸಿ’ಯ ಕಾವಿ ‘ಗೌನಿ’ಗಿಂತ ಬೇರೆ ‘ಗೌನಿ’ನ ಆವಶ್ಯಕತೆ ಇಲ್ಲ. ನನಗೆ ‘ಸ್ವಾಮಿ’ ಎಂಬ ದೊಡ್ಡ ‘ಪದವಿ’ಯೇ ರಾಮಕೃಷ್ಣ ಮಹಾಸಂಘದ ಪರಮಾಧ್ಯಕ್ಷರಿಂದ ಕೊಡಲ್ಪಟ್ಟಿದೆ” ಎಂದರು. ಎಂಥ ಸರಳತನ ಮತ್ತು ತಮ್ಮ ನೆಚ್ಚಿನ ಸಂಘದ ಬಗ್ಗೆ ಅಭಿಮಾನ ಸ್ವಾಮಿಗಳಿಗೆ!

ಮತ್ತೊಬ್ಬರು ಮಾಡಿದ ತಪ್ಪನ್ನು ತಿದ್ದುವಾಗಲೂ ಅದನ್ನು ಎತ್ತಿ ಆಡುವ ಪರಿಪಾಠ ಸ್ವಾಮಿ ರಂಗನಾಥಾನಂದಜಿ ಅವರಿಗೆ ಇರಲಿಲ್ಲ. ಕೊಲ್ಕತಾದ ಇನ್ಸ್ಟಿಟ್ಯೂಟ್ ಆಫ್ ಕಲ್ಚರ್‌ನಲ್ಲಿ ಮುಖ್ಯಸ್ಥರಾಗಿ ಸ್ವಾಮಿಗಳು ಕಾರ್ಯ ನಿರ್ವಹಿಸುತ್ತಿದ್ದಾಗ ಸಂಭವಿಸಿದ ಘಟನೆ ಇದು.

ಅಲ್ಲಿ ಮೂವರು ಜಪಾನಿ ಬ್ರಹ್ಮಚಾರಿಗಳು ಇದ್ದರು. ಪ್ರತಿಯೊಬ್ಬರಿಗೂ ಕೆಲಸ ಕಾರ್ಯಗಳನ್ನು ಹಂಚಲಾಗಿತ್ತು. ಒಬ್ಬ ಜಪಾನಿ ಬ್ರಹ್ಮಚಾರಿಗೆ ಅಲ್ಲಿನ ಪುಸ್ತಕಗಳ ಮಾರಾಟ, ಅದರ ಲೆಕ್ಕಾಚಾರಗಳ ಜವಾಬ್ದಾರಿ ಇತ್ತು. ಪ್ರತಿದಿನದ ಮಾರಾಟದ ಹಣವನ್ನು ರಾತ್ರಿ ತನ್ನ ಸುಪರ್ದಿನಲ್ಲಿ ಇದ್ದ ಒಂದು ಚಿಕ್ಕ ಬೀರುವಿನಲ್ಲಿಟ್ಟು ಬೀಗ ಹಾಕಿ, ಮಾರನೇ ದಿನ ಅದನ್ನು ಕಛೇರಿಗೆ ಸಂದಾಯ ಮಾಡುವ ನಿಯಮವಿತ್ತು. ಬ್ರಹ್ಮಚಾರಿಗಳು ಬೌದ್ಧ ತತ್ತ್ವದಲ್ಲಿ ನಂಬಿಕೆ ಉಳ್ಳವರು. ಸತ್ಯ, ಅಹಿಂಸೆ – ಇವುಗಳನ್ನು ಎಲ್ಲರೂ ತಮ್ಮಂತೆಯೇ ಆಚರಿಸುತ್ತಾರೆಂದು ಭಾವಿಸಿದ್ದಿರಬಹುದು. ಒಂದು ದಿನ ‘ಮರೆವು’ ಅವರನ್ನು ಆವರಿಸಿತು. ಬೀರುವಿಗೆ ಬೀಗ ಹಾಕಲಿಲ್ಲ. ಬೆಳಗ್ಗೆ ಎದ್ದು ಮಾಮೂಲಿನಂತೆ ತಮ್ಮ ಕೆಲಸಕ್ಕೆ ಹೊರಡುವಾಗ, ಹಣ ತೆಗೆದುಕೊಳ್ಳಲು ಬೀರುವಿನ ಬಾಗಿಲು ತೆರೆದರು. ‘ಧನಲಕ್ಷ್ಮಿ’ ಮಾಯ! ಬೀಗ ಹಾಕದೆ ಮರೆತಿದ್ದು ಆಗ ನೆನಪಿಗೆ ಬಂದಿರಬಹುದು. ಅವರಿಗೆ ಏನು ಮಾಡಲೂ ತೋಚದೆ ಹೋಯಿತು. ಬೀರುವಿನಲ್ಲಿ ಹಣ ಇಡುತ್ತಿದ್ದ ವಿಷಯ ಕೇವಲ ಅಡುಗೆಯವನಿಗೆ ಮಾತ್ರ ಗೊತ್ತಿತ್ತು. ರಾತ್ರಿ ‘ಧನಲಕ್ಷ್ಮಿ’ ಅವನೊಡನೆ ಪಲಾಯನ ಮಾಡಿದ್ದಳು. ಆದರೆ ಪ್ರತ್ಯಕ್ಷವಾಗಿ ಕಾಣದ್ದನ್ನು ಹೇಗೆ ಸಾಬೀತುಮಾಡಿ ತೋರಿಸುವುದು? ಸುಮಾರು ೮೦೦ ರೂಪಾಯಿಗಳು ಕಳುವಾಗಿತ್ತು. ಆ ಬ್ರಹ್ಮ ಚಾರಿಗಳು ಚಿಂತಾಕ್ರಾಂತರಾದರು. ತಮ್ಮ ಬೇಜವಾಬ್ದಾರಿಯ ಬಗ್ಗೆಯೂ ಆತ್ಮಾವಲೋಕನ ಮಾಡಿಕೊಂಡಿರಬಹುದು.

ಬೆಳಗಿನ ಉಪಾಹಾರಕ್ಕೆ ಆಶ್ರಮವಾಸಿಗಳೆಲ್ಲ ಊಟದ ಮನೆ ಯಲ್ಲಿ ಸೇರಿದರು. ಸ್ವಾಮಿಗಳೂ ಇದ್ದರು (ಈ ವೇಳೆಗೆ ಕಳುವಿನ ಸುದ್ದಿ ಸ್ವಾಮಿಗಳಿಗೆ ಮುಟ್ಟಿತ್ತು). ಮಾಮೂಲಿನಂತೆ ತಿಂಡಿ ಆಯಿತು. ಇನ್ನೇನು ಎಲ್ಲರೂ ತಮ್ಮ ತಮ್ಮ ಆಸನಗಳಿಂದ ಏಳಬೇಕು, ಅಷ್ಟರಲ್ಲಿ ಸ್ವಾಮಿಗಳು, “ಒಬ್ಬ ಹಳ್ಳಿಯ ಅನಕ್ಷರಸ್ಥ ಅಡುಗೆಯವನು ಒಬ್ಬ ತಿಳಿವಳಿಕೆಯುಳ್ಳ ಬ್ರಹ್ಮಚಾರಿಗಿಂತಲೂ ಬುದ್ಧಿವಂತ ಎಂದು ಹೇಳ ಬಹುದು” ಎಂದಷ್ಟೇ ನುಡಿದರು. ಹೆಚ್ಚಿಗೆ ಏನೂ ಮಾತನಾಡಲಿಲ್ಲ. ಎಲ್ಲರೂ ತಮ್ಮ ತಮ್ಮ ಕಾರ್ಯಗಳಿಗೆ ಹೊರಟುಹೋದರು. ಅಡುಗೆಯವನನ್ನು ‘ಕಳ್ಳ’ ಎಂದೂ ನೇರವಾಗಿ ಅವರು ಕರೆಯಲಿಲ್ಲ.

ಆದರೆ ಬ್ರಹ್ಮಚಾರಿಗಳಿಗೆ ತಮ್ಮ ಬೇಜವಾಬ್ದಾರಿಯ ಬಗ್ಗೆ ಎಚ್ಚರಿಕೆ ನೀಡಿದರು. ಇದು ಸ್ವಾಮಿಗಳ ಬೋಧನೆಯ ಕ್ರಮ!

ಒಮ್ಮೆ ಸ್ವಾಮಿ ರಂಗನಾಥಾನಂದಜಿ ಅವರು ಕೊಲ್ಕತಾದಿಂದ ಹೈದರಾಬಾದಿಗೆ ವಿಮಾನದಲ್ಲಿ ಪಯಣಿಸುತ್ತಿದ್ದರು. ರಾಮಕೃಷ್ಣ ಮಹಾಸಂಘದ ಕಾರ್ಯದರ್ಶಿಗಳಾಗಿದ್ದ ಒಬ್ಬ ಹಿರಿಯ ಸ್ವಾಮಿಗಳೂ ಅವರ ಜೊತೆಯಲ್ಲಿದ್ದರು. ಊಟದ ಸಮಯಕ್ಕೆ ಸರಿಯಾಗಿ ಗಗನಸಖಿ ಇಬ್ಬರಿಗೂ ಊಟದ ಪ್ಯಾಕೆಟ್‌ಗಳನ್ನು ಕೊಟ್ಟಳು. ಸ್ವಾಮಿಗಳು ಅದನ್ನು ತಮ್ಮ ಪಕ್ಕದಲ್ಲಿ ಜೋಪಾನವಾಗಿ ಇಟ್ಟುಕೊಂಡರು. ಜೊತೆಗಾರ ಸ್ವಾಮಿಗಳಿಗೆ ಕುತೂಹಲ. ಏಕೆಂದರೆ ಸ್ವಾಮಿಗಳು ಪಥ್ಯದ ಆಹಾರ ಮಾತ್ರ ತೆಗೆದುಕೊಳ್ಳುತ್ತಿದ್ದರು. ಹೊರಗಡೆ ಎಲ್ಲಿಯೂ ಏನನ್ನೂ ತಿನ್ನುತ್ತಿರಲಿಲ್ಲ.

ವಿಮಾನ ಹೈದರಾಬಾದ್ ತಲುಪಿತು. ಸ್ವಾಮಿಗಳು ಮರೆಯದೆ ತಮ್ಮ ಊಟದ ಪ್ಯಾಕೆಟನ್ನು ತೆಗೆದುಕೊಂಡು ಕೆಳಗಿಳಿದರು. ವಿಮಾನ ನಿಲ್ದಾಣದಿಂದ ಹೊರಗೆ ಬರುವಾಗ ಅವರು ಅತ್ತಿತ್ತ ಯಾರನ್ನೋ ನಿರೀಕ್ಷಿಸುವಂತೆ ತೋರಿತು. ಒಬ್ಬ ಅಂಗವಿಕಲ ಹುಡುಗ ಆತುರಾತುರವಾಗಿ ಬಂದ. ಸ್ವಾಮಿಗಳು ಅವನಿಗೆ ಊಟದ ಪ್ಯಾಕೆಟ್ ಕೊಟ್ಟರು. ಅವನು ಸಂತೋಷದಿಂದ ತೆಗೆದುಕೊಂಡು ಹೋದ. ಸ್ವಾಮಿಗಳ ಮುಖದಲ್ಲೂ ಸಂತೃಪ್ತ ಭಾವನೆ. ಹುಡುಗನೂ ಸ್ವಾಮಿಗಳ ಬರುವಿಕೆಗಾಗಿ ಕಾದಿದ್ದನೆಂದು ಕಾಣುತ್ತದೆ. ಪರಸ್ಪರ ಒಪ್ಪಂದ ಇರಬೇಕು ಎನ್ನಿಸಿ, ಜೊತೆಗಾರ ಸ್ವಾಮಿಗಳು ಮನದಲ್ಲೇ ಸ್ವಾಮಿಗಳ 'ದರಿದ್ರನಾರಾಯಣ ಪ್ರೀತಿ'ಯನ್ನು ಅಭಿನಂದಿಸಿದರು.

ಶ್ರೀಮತಿ ಇಂದಿರಾ ಗಾಂಧಿಯವರು ಪ್ರಧಾನಮಂತ್ರಿಗಳಾಗಿದ್ದಾಗಿನ ಸಂದರ್ಭ. ಅವರು, "ಮಹಾರಾಜ್, ನಿಮ್ಮ ಉಪನ್ಯಾಸವನ್ನು ಸಭೆಯಲ್ಲಿ ಕುಳಿತು ಕೇಳಬೇಕೆಂದು ನನಗೆ ಆಸೆ. ಅವಕಾಶವಾಗುತ್ತದೆಯೇ?" ಎಂದು ಕೇಳಿದರು. ಸ್ವಾಮಿಗಳು, "ಬಹಳ ಸಂತೋಷ. ನೀವು ಬರುವುದಾದರೆ ನನಗೂ ಆನಂದವಾಗುತ್ತದೆ. ಆದರೆ ನಿಮ್ಮ ರಕ್ಷಣಾ ವ್ಯವಸ್ಥೆಗೆ ಅಲ್ಲಿ ಕಷ್ಟವಾಗುತ್ತದೆ. ಅದು ಸಾರ್ವಜನಿಕ ಸಭೆ" ಎಂದಾಗ ಆಕೆ ಮೌನವಾದರು. ಸ್ವಾಮಿಗಳ ಉಪನ್ಯಾಸ ಕಾರ್ಯದಲ್ಲಿ ಯಾರಿಗೂ ವಿಶೇಷ ಸೌಲಭ್ಯ ಸೌಕರ್ಯಗಳು ಇರುತ್ತಿರಲಿಲ್ಲ.

ಒಮ್ಮೆ ಕೆಲವು ಉನ್ನತ ಅಧಿಕಾರಿಗಳ ಕಡೆಯವರು ತಮ್ಮ ಮೇಲಧಿಕಾರಿಗಳಿಗಾಗಿ, ಮುಂದಿನ ಸಾಲಿನಲ್ಲಿ, ಖುರ್ಚಿಗಳ ಮೇಲೆ ಕರವಸ್ತ್ರವನ್ನೋ, ಚೀಲವನ್ನೋ ಇಟ್ಟು 'ಸೀಟು' ಕಾದಿರಿಸುತ್ತಿದ್ದುದನ್ನು ಕಂಡು ಸ್ವಾಮಿಗಳು, "ಇಲ್ಲಿ ಯಾರಿಗೂ ಸ್ಥಳ ಮೀಸಲಿಲ್ಲ. ಯಾರು ಎಲ್ಲಿ ಬೇಕಾದರೂ ಕುಳಿತುಕೊಳ್ಳಬಹುದು. ದಯವಿಟ್ಟು ಆ ಕರವಸ್ತ್ರ, ಚೀಲಗಳನ್ನು ತೆಗೆಯಿರಿ" ಎಂದು ಹೇಳಿದರು. ಗಣ್ಯಾತಿಗಣ್ಯರು ಸಹ ಸಭಾಂಗಣದ ಹೊರಗಿನ ಹುಲ್ಲು ಹಾಸಿನ ಮೇಲೆ ಕುಳಿತು ಸ್ವಾಮಿಗಳ ಭಾಷಣ ಕೇಳುತ್ತಿದ್ದರು. ಸ್ವಾಮಿ ರಂಗನಾಥಾನಂದರದ್ದು ನಿಜವಾಗಲೂ ಸಮದೃಷ್ಟಿ!

ಸ್ವಾಮಿಗಳ ಸರಳತೆಯ ವಿಚಾರದಲ್ಲಿ ೧೯೫೭ ನೇ ಡಿಸೆಂಬರ್ ಮಾಹೆಯಲ್ಲಿ ನನ್ನ ಜೀವನದಲ್ಲಿ ನಡೆದ ಘಟನೆಯೊಂದು ಸದಾ ನೆನಪಿಗೆ ಬರುತ್ತದೆ. ಸ್ವಾಮಿಗಳು ಯಾವಾಗಲಾದರೂ ಬೆಂಗಳೂರಿನಿಂದ ಮೈಸೂರಿಗೆ ಹೋಗುವಾಗಲೋ ಅಥವಾ ಹಿಂದಿರುಗುವಾಗಲೋ ಮಂಡ್ಯದಲ್ಲಿ ನನ್ನನ್ನು ಭೇಟಿ ಮಾಡುತ್ತಿದ್ದರು. ಒಮ್ಮೆ, "ಬೆಂಗಳೂರಿನಿಂದ ಮೈಸೂರಿಗೆ ಬೆಳಗ್ಗೆ ೧೧.೩೦ ಗಂಟೆಗೆ ಹೊರಡುವ ರೈಲಿನಲ್ಲಿ ಹೋಗುತ್ತಿದ್ದೇನೆ. ಸಾಧ್ಯವಾದರೆ ಸ್ಟೇಷನ್ನಿಗೆ ಬಂದು ಭೇಟಿಮಾಡು" ಎಂದು ಹೇಳಿದರು. ಆ ರೈಲು ಮಧ್ಯಾಹ್ನ ೨ ಗಂಟೆ ವೇಳೆಗೆ ಮಂಡ್ಯಕ್ಕೆ ಬರುತ್ತಿತ್ತು. ಸ್ವಾಮಿಗಳನ್ನು ಭೇಟಿ ಮಾಡುವುದೆಂದರೆ ಏನೋ ಸಡಗರ, ಸಂಭ್ರಮ. ನಾನು ನಾಲ್ಕು ಕಿತ್ತಲೆಹಣ್ಣುಗಳನ್ನು ಕೊಂಡುಕೊಂಡು ಸ್ಟೇಷನ್ನಿಗೆ ಹೋದೆ. ಸರಿಯಾದ ವೇಳೆಗೆ ರೈಲು ಬಂದಿತು. ಬೋಗಿಯ ಬಾಗಿಲಿನಲ್ಲೇ ಸ್ವಾಮಿಗಳು ನಿಂತಿದ್ದರು. ನಾನು ಹತ್ತಿರ ಹೋದ ತಕ್ಷಣ ನನಗೆ ಒಂದು ಕಾಗದದ ಪೊಟ್ಟಣವನ್ನು ಕೊಟ್ಟು, ನಮ್ಮ ಕುಟುಂಬದ ಹಾಗೂ ಮಕ್ಕಳ ಯೋಗಕ್ಷೇಮ ವಿಚಾರಿಸಿದರು. ಮಕ್ಕಳ ವಿದ್ಯಾಭ್ಯಾಸದ ಕಡೆ ಹೆಚ್ಚು ಗಮನ ಕೊಡಲು ಹೇಳಿದರು. "ಏನು ನಿನ್ನ ಕೈಯಲ್ಲಿರುವುದು, ಕೊಡು. ರೈಲು ಹೊರಟುಬಿಡುತ್ತದೆ" ಎಂದರು. ನಾನು ಸ್ವಲ್ಪ ಸಂಕೋಚದಿಂದಲೇ, ತಂದಿದ್ದ ಕಿತ್ತಲೆಹಣ್ಣುಗಳನ್ನು ಅವರಿಗೆ ಕೊಟ್ಟೆ. ರೈಲು ಹೊರಟಿತು. ಸ್ವಾಮಿಗಳು ಕಣ್ಣಿಗೆ ಕಾಣುವವರೆಗೂ ಕೈಬೀಸುತ್ತಲೇ ಇದ್ದರು. ನಾನೂ ಭಾವಪರವಶಳಾಗಿ ನಿಂತಿದ್ದೆ. ಸ್ಟೇಷನ್ನಿನಲ್ಲಿದ್ದ ಸುತ್ತಮುತ್ತಲಿನ ಜನರಿಗೂ ಆಶ್ಚರ್ಯ! ಸ್ವಾಮಿಗಳು ಕೊಟ್ಟ ಪೊಟ್ಟಣ ಬಿಚ್ಚಿ ನೋಡಿದೆ. ನಾಗಪುರದ ದೊಡ್ಡ ದೊಡ್ಡ ನಾಲ್ಕು 'ಸಂತರೇ' ಎಂಬ ಸಿಹಿತಿಂಡಿಗಳು! ಹಿಂದಿನ ದಿನ ನಾಗಪುರದಿಂದ ಬೆಂಗಳೂರಿಗೆ ಬಂದಿದ್ದರು. ಮಹಾ'ಸಂತ'ರಿಂದ 'ಸಂತರೇ' ಸಿಹಿಯ ಪ್ರಸಾದ!

ಮನದಾಳದಲ್ಲಿ ಹುದುಗಿರುವ ನೆನಪುಗಳು ಆಗಾಗ್ಗೆ ಹೀಗೆ ಮರುಕಳಿಸುತ್ತವೆ. ಅವುಗಳನ್ನು ನೆನೆದು ನೆನೆದು ಆನಂದಪಡುತ್ತೇನೆ. ನಾಲ್ಕು ಜನರಿಗೆ ಹಂಚಿ ತೃಪ್ತಿಪಡುವ ಅವಕಾಶವಿದು. ಸ್ವಾಮಿ ರಂಗನಾಥಾನಂದಜಿ ಅವರ ಕುರಿತಾದ ಈ ಬಗೆಯ ನೆನಪುಗಳು ನೂರಾರು, ಸಾವಿರಾರು. ಅವುಗಳ ಕೆಲವು 'ತುಂತುರುಹನಿ'ಗಳ ತಂಪನ್ನು ಪಡೆದು, ಮತ್ತೂ ಮತ್ತೂ ಅನುಭವಿಸಬೇಕೆಂಬ ಆಸೆ ಆಕಾಂಕ್ಷೆ ಇದನ್ನು ಓದಿ ಕೆಲವರಿಗಾದರೂ ಉಂಟಾದರೆ, ಈ ಎರಡು 'ಹನಿ' ಗಳ ಲೇಖನ ಸಾರ್ಥಕವೆಂದು ಭಾವಿಸುತ್ತೇನೆ. ಸ್ವಾಮಿ ರಂಗನಾಥಾನಂದಜಿ ಮಹಾರಾಜ್ ಅವರ ಜನ್ಮಶತಮಾನೋತ್ಸವದ ಸಂದರ್ಭದಲ್ಲಿ ಅವರಿಗೆ ಶ್ರದ್ಧಾಭಕ್ತಿಪೂರ್ವಕ ಪ್ರಣಾಮಗಳು.


**ಓದುಗರಲ್ಲಿ ವಿನಂತಿ**

**ನೀವು ಓದಿ ಆನಂದಿಸುತ್ತಿರುವ 'ವಿವೇಕಪ್ರಭ' ದ ಪ್ರಯೋಜನವನ್ನು ಇತರರೂ ಪಡೆಯುವಂತಾಗಲಿ. ದಯಯವಿಟ್ಟು ಈ ವರ್ಷದ ದೀಪಾವಳಿ ಹಬ್ಬದ ಸಂದರ್ಭದಲ್ಲಿ ನಿಮ್ಮ ಬಂಧುಮಿತ್ರರಿಗೆ 'ವಿವೇಕಪ್ರಭ' ಪತ್ರಿಕೆಯನ್ನು ಕೊಡುಗೆಯಾಗಿ ನೀಡಿ. ಇದೇ ನೀವು ಮಾಡಬಹುದಾದ ದೊಡ್ಡ ಸೇವೆ. ಇಂದೇ ತ್ವರೆ ಮಾಡಿ.**